ದಿನಾಂಕ 24-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃ 1, 2, 4, 6 ಮತ್ತು 7 ನೇ ಪ್ರತಿವಾದಿಗಳ ಪರ ವಕೀಲರಿಂದ</u>**

ಈ ದಾವೆಯನ್ನು ಇಷ್ತಕಾ ಹುಸೇನ ಮತ್ತು ಅಸ್ಫಕ್ ಹುಸೇನರವರು ಸಲ್ಲಿಸಿರುತ್ತಾರೆ. ಈ ದಾವೆಯನ್ನು ವಿಭಾಗ ಕೋರಿ ಸಲ್ಲಿಸಲಾಗಿದೆ ಎಂದರೆ ನಿಜ. 1, 2, 4 ಮತ್ತು 5 ನೇ ಪ್ರತಿವಾದಿಗಳು ಏನು ಪ್ರತಿವಾದ ಪತ್ರ ಸಲ್ಲಿಸಿದ್ದಾರೆಂದು ನನಗೆ ಗೊತ್ತಿಲ್ಲ. ನಮ್ಮ ವಕೀಲರಿಗೆ ನನ್ನ ಪ್ರತಿವಾದ ಪತ್ರ ಸಲ್ಲಿಸಲು ನಾನು ಮಾಹಿತಿ ನೀಡಿರುತ್ತೇನೆ. 1, 2, 4 ಮತ್ತು 5 ನೇ ಪ್ರತಿವಾದಿಗಳು ದಾವಾ ಸ್ವತ್ತುಗಳು ತಮ್ಮ ಸ್ವಂತ ಸ್ವತ್ತುಗಳು ಎಂದು ಪ್ರತಿವಾದ ಪತ್ರ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1, 2, 4 ಮತ್ತು 5 ನೇ ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರವನ್ನು ಏನೆಂದು ಸಲ್ಲಿಸಿದ್ದಾರೆಂದು ನಮ್ಮ ವಕೀಲರ ಮುಖಾಂತರ ನನಗೆ ತಿಳಿದುಕೊಳ್ಳಲು ನನಗೆ ಯಾವುದೇ ತೊಂದರೆ ಇರಲ್ಲಿಲ್ಲ. ನಾನು ಪ್ರತಿ ಮುದ್ದತಿಗೆ ನ್ಯಾಯಾಲಯದಲ್ಲಿ ಹಾಜರಾಗುತ್ತಿರುತ್ತೇನೆ.

ದಿನಾಂಕ 01-06-2008 ರಂದು ದಾನ ಪತ್ರ ಮಾಡಿದ್ದಾರೆ. ನನಗೆ ಯಾವ ಕಾರಣಕ್ಕಾಗಿ ದಾನ ಕೊಡಲಾಗಿದೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ದಾನ ಪತ್ರಮಾಡಲಾದ ದಿನಾಂಕವನ್ನು ನನ್ನ ಪ್ರತಿವಾದ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಈಗ ನಾನು ನನ್ನ ಪ್ರತಿವಾದ ಪತ್ರ ನೋಡುತ್ತಿದ್ದು ಅದರಲ್ಲಿ ದಾನ ಪತ್ರ ಏಕೆ ಮಾಡಲಾಗಿದೆ ಎಂದು ತಿಳಿಸಿಲ್ಲ. ಸದರಿ ದಾನ ಪತ್ರದ ಆಧಾರದ ಮೇಲೆ ನನ್ನ ಹೆಸರಿಗೆ ಖಾತೆ ವರ್ಗಾಯಿಸಲು ಪಟ್ಟಣ ಪಂಚಾಯತಿಗೆ 4-5 ವರ್ಷಗಳ ಹಿಂದೆ ಅರ್ಜಿ ನೀಡಿದ್ದೆ. 1, 2, 4 ಮತ್ತು 5 ನೇ ಪ್ರತಿವಾದಿಗಳು ತಕರಾರು ಮಾಡಿದ್ದರಿಂದ ನನ್ನ ಹೆಸರಿಗೆ ಖಾತೆ ವರ್ಗಾವಣೆ ಆಗಲಿಲ್ಲ. ನಾನು ಅರ್ಜಿ ನೀಡಿದ ನಂತರ ಸದರಿ ತಕರಾರು ಸಲ್ಲಿಸಲಾಗಿದೆ ಎಂದರೆ ನಿಜ. ಆದ್ದರಿಂದ ಪಟ್ಟಣ ಪಂಚಾಯತಿಯವರು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಲು ನನಗೆ ನೋಟಿಸು ನೀಡಿರುತ್ತಾರೆ. ಆ ಪ್ರಕಾರ ನಾನು ಯಾವುದೇ ದಾವೆ ಸಲ್ಲಿಸಿರುವುದಿಲ್ಲ.

ದಾನ ಪತ್ರವನ್ನು 1 ನೇ ಪ್ರತಿವಾದಿ ಸಾದಿಕ್ ಹುಸೇನರವರು ಬರೆದಿರುತ್ತಾರೆ.

ಸದರಿ ಪತ್ರವನ್ನು ಎಲ್ಲಿ ಬರೆಯಲಾಯಿತು ಎಂದು ನನಗೆ ಗೊತ್ತಿಲ್ಲ. ಸದರಿ ಪತ್ರವನ್ನು ಬರೆಯುವ ಸಮಯದಲ್ಲಿ ಯಾರು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ನೋಟರಿಯನ್ನು ಎಲ್ಲಿ ಮಾಡಿಸಲಾಯಿತು ಎಂದು ನನಗೆ ಗೊತ್ತಿಲ್ಲ. ದಾನ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು.

ದಾವಾ ಆಸ್ತಿ 1 ಖಾಲಿ ಜಾಗ ಎಂದರೆ ನಿಜ. ಸದರಿ ಸ್ವತ್ತನ್ನು ಪರಶುರಾಮರವರಿಗೆ ಮಾರಾಟ ಮಾಡಲಾಗಿದೆ ಎಂದರೆ ನಿಜ. ಪರಶುರಾಮರವರು ಸದರಿ ಸ್ವತ್ತಿನಲ್ಲಿ ಕಟ್ಟಡ ಕಟ್ಟುತ್ತಿದ್ದಾರೆ ಎಂದರೆ ನಿಜ.

ದಾವಾ ಆಸ್ತಿ 2 ರಲ್ಲಿ ಮೊದಲು ಚಿತ್ರ ಮಂದಿರ ಇತ್ತು ಎಂದರೆ ನಿಜ. ಸದರಿ ಚಿತ್ರ ಮಂದಿರ 2009 ರಿಂದ ಸ್ಥಗಿತಗೊಂಡಿದೆ ಎಂದರೆ ನಿಜ. ಸದರಿ ಚಿತ್ರ ಮಂದಿರದ ಕೀಲಿ ಕೈಗಳು 1 ನೇ ಪ್ರತಿವಾದಿಯ ಬಳಿ ಇದೆ ಎಂದರೆ ಸರಿಯಲ್ಲ.

**1, 2, 4, 6 ಮತ್ತು 7 ನೇ ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಆದ್ದರಿಂದ ಮುಂದುವರೆದ ಪಾಟಿ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ